**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ**

C.C No.258/2013
CW-18 PW-13

ಹೆಸರು ಃ ಜಗದೀಶ ಹಂಚನಾಳ

ತಂದೆ ಹೆಸರು ಃ ಚನ್ನಪ್ಪ

ವಯಸ್ಸು ಃ 48 ವರ್ಷ

ಉದ್ಯೋಗ ಃ ಆರಕ್ಷಕ ನಿರೀಕ್ಷಕರು, ಭದ್ರಾವತಿ ಗ್ರಾಮೀಣ ಪೊಲೀಸ ಠಾಣೆ.

ವಾಸ ಸ್ಥಳ ಃ ಭದ್ರಾವತಿ.

---

**ಪ್ರಮಾಣವಚನ ಭೋಧಿಸಲಾಯಿತು. ದಿಃ 24-03-2025**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ**

ನಾನು ಜೂನ್ 2006 ರಿಂದ ಅಕ್ಟೋಬರ್ 2008ರ ವರೆಗೆ ಆರಕ್ಷಕ ಉಪನಿರೀಕ್ಷಕನಾಗಿ ವಾಡಿ ಪೊಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ಸದರಿ ಪ್ರಕರಣದಲ್ಲಿ ಚಾಸಾ-17ರವರಿಂದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ.

ನಾನು ಈ ಪ್ರಕರಣದ ಕಡತವನ್ನು ಪರಿಶೀಲಿಸಿದಾಗ, ನನಗೆ ಚಿತ್ತಾಪೂರದ ಜಿಲ್ಲಾ ಪಂಚಾಯತ ಉಪ-ವಿಭಾಗದ ಕಛೇರಿಯಿಂದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಂದ ಕೆಲವೊಂದು ದಾಖಲಾತಿಗಳು ಬೇಕಾಗಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಅವರಿಗೆ ಪತ್ರಗಳನ್ನು/ನಿವೇದನೆಗಳನ್ನು ದಿನಾಂಕ: 17-07-2006, 19-07-2006 ಮತ್ತು 22-09-2006ರಂದು ಕಳುಹಿಸಿಕೊಟ್ಟಿರುತ್ತೇನೆ.

ತದನಂತರ, ದಿನಾಂಕ: 07-07-2006ರಂದು 14 ಕಾಮಗಾರಿಗಳನ್ನು ವೀಕ್ಷಿಸಲು ಜಿಲ್ಲಾ ಪಂಚಾಯತ ಉಪ-ವಿಭಾಗದ ಕಛೇರಿಯಿಂದ ಸಲಾಂ, ಅದೇ ಕಛೇರಿಯ ಶರಣು ಮತ್ತು ಬಸವರಾಜ ಎಂಬುವವರು ಇವರು ನಮ್ಮ ಠಾಣೆಗೆ ಬಂದು ಹಾಜರಾಗಿ ಸದರಿಯವರಿಗೆ ಕಾಮಗಾರಿಗಳನ್ನು ತೋರಿಸಲು ಕೇಳಿಕೊಂಡಾಗ ಅವರು ಯಾರು ನನಗೆ ಕಾಮಗಾರಿಗಳನ್ನು ತೋರಿಸಿರಲಿಲ್ಲ.

ದಿನಾಂಕ: 07-10-2006ರಂದು ಚಾಸಾ-4, ಚಾಸಾ-5 ಮತ್ತು ಚಾಸಾ-6ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ: 12-10-2006ರಂದು ಸದರಿ ಕಾಮಗಾರಿಗಳನ್ನು ಆರೋಪಿತನಿಗೆ ವಹಿಸಿದ ಬಗ್ಗೆ ಧೃಡೀಕೃತ ಕಾಗದ ಪತ್ರಗಳನ್ನು ನೀಡುವಂತೆ ಚಿತ್ತಾಪೂರದ ಜಿಲ್ಲಾ ಪಂಚಾಯತ ಉಪವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಿಗೆ ಪುನಃ ಪತ್ರವನ್ನು ಬರೆದಿರುತ್ತೇನೆ.

ದಿನಾಂಕ: 07-02-2007ರಂದು ಕಾರ್ಯನಿರ್ವಾಹಕ ಅಭಿಯಂತರರು, ಜಿಲ್ಲಾ ಪಂಚಾಯತ, ಕಲಬುರಗಿ ಇವರಿಗೆ ಸದರಿ ಕಾಮಗಾರಿಗಳನ್ನು ಪರಿಶೀಲಿಸಲು ಸಿಬ್ಬಂದಿಗಳನ್ನು ನೇಮಕ ಮಾಡಿ ಕಳುಹಿಸುವಂತೆ ನಾನು ಒಂದು ಪತ್ರವನ್ನು ಬರೆದಿರುತ್ತೇನೆ. ಸದರಿ ಪತ್ರಕ್ಕೆ ದಿನಾಂಕ: 01-06-2007ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ರೇವಣಸಿದ್ದಯ್ಯ ಚಾಸಾ-1 ರವರು ಬೆಳಿಗ್ಗೆ 9-00 ಗಂಟೆಗೆ ನಮ್ಮ ಠಾಣೆಗೆ ಬಂದು ಹಾಜರಾದರು. ನಾನು ಚಾಸಾ-2 ಮತ್ತು ಚಾಸಾ-3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ಇಂಗಳಗಿಯ ಸಮುದಾಯ ಭವನಕ್ಕೆ ಹೋಗಿರುತ್ತೇನೆ. ಅಲ್ಲಿ 10-00 ಗಂಟೆಯಿಂದ 11-00 ಗಂಟೆಯವರೆಗೆ ನಮೂದಿತ ಕಾಮಗಾರಿಯ ಒಂದು ಪಂಚನಾಮೆ ಕ್ರಮವನ್ನು ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಜರುಗಿಸಿರುತ್ತೇನೆ. ಸದರಿ ಸಮುದಾಯ ಭವನ ಅಪೂರ್ಣವಾದಂತಹ ಕಟ್ಟಡವಾಗಿತ್ತು. ಅದೇ ದಿನ ಸದರಿ ಪಂಚರನ್ನು ಕರೆದುಕೊಂಡು ವಾಡಿಯ ರೆಸ್ಟಕ್ಯಾಂಪ ತಾಂಡಾಕ್ಕೆ ಕರೆದುಕೊಂಡು ಹೋಗಿ ಅಂಗನವಾಡಿಯ ಕಟ್ಟಡವನ್ನು ತೋರಿಸಿದಂತೆ ಪಂಚನಾಮೆ ಕ್ರಮವನ್ನು ಮಧ್ಯಾಹ್ನ 12-15 ರಿಂದ 01-15ರ ವರೆಗೆ ಜರುಗಿಸಿರುತ್ತೇನೆ. ಸದರಿ ಕಾಮಗಾರಿಯನ್ನು ಚಾಸಾ-8ರವರ ಮನೆಯ ಮುಂದೆ ಮಾಡಿದ್ದು, ಅಂಗನವಾಡಿ ಕಟ್ಟಡ ಕಟ್ಟಿರಲಿಲ್ಲ, ಸದರಿ ಕಟ್ಟಡ ಅಪೂರ್ಣ ಕಟ್ಟಡವಾಗಿತ್ತು. ನಂತರ ಅದೇ ದಿನ ಹಲಕಟ್ಟಿಯ ಗುರುನಾಯಕ ತಾಂಡಾಕ್ಕೆ ಚಾಸಾ-2 ಮತ್ತು 3ರವರನ್ನು ಕರೆದುಕೊಂಡು ಸದರಿ ಪೈಪಲೈನ್ ಕಾಮಗಾರಿಯನ್ನು ಪರಿಶೀಲನೆ ಮಾಡಿದಾಗ, ಇಬ್ರಾಹಿಂ ಪಟೇಲ್ ರವರ ಜಮೀನಿನಲ್ಲಿ ಒಂದು ಬೊರವೆಲ್ ನಿಂದ ಅಶೋಕ ರಾಠೋಡ್ ಇವರ ಮನೆಯವರೆಗೆ ಪೈಪಲೈನ್ ಹಾಕಿಸಿ ಒಂದು ಮಿನಿ ಟ್ಯಾಂಕ್ ಹಾಕಿದ್ದರು, ಸದರಿ ಕಾಮಗಾರಿಯೂ ಸಹ ಅಪೂರ್ಣ ಕಾಮಗಾರಿಯಾಗಿತ್ತು. ಸದರಿ ಸ್ಥಳದ ಪಂಚನಾಮೆ ಕ್ರಮವನ್ನು ಮಧ್ಯಾಹ್ನ 2-00 ರಿಂದ 3-00ರ ವರೆಗೆ ನಾನು ಪಂಚರಾದ 2 ಮತ್ತು 3 ರವರ ಸಮಕ್ಷಮ ಜರುಗಿಸಿರುತ್ತಾನೆ. ನಂತರ ಇನ್ನೊಂದು ಕಾಮಗಾರಿ ಹಲಕಟ್ಟಾ ಗ್ರಾಮದ ರಸ್ತೆ ಸುಧಾರಣೆ ಕಾಮಗಾರಿಯಾಗಿದ್ದು, ಸದರಿ ಕಾಮಗಾರಿಯನ್ನು ಪರಿಶೀಲಿಸಿ ಚಾಸಾ-2 ಮತ್ತು ಚಾಸಾ-3ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಯಾದಗಿರಿ ಮುಖ್ಯರಸ್ತೆಯ ಮೂಲಕ ಹೋದಾಗ, ಯಾದಗಿರಿ ಮುಖ್ಯರಸ್ತೆಯಿಂದ ಮಠದ ಕಟ್ಟೆಯವರೆಗೆ ಕಾಮಗಾರಿಯಾಗಿದ್ದು, ಅದನ್ನು ವೀಕ್ಷಿಸಿದಾಗ, ಸದರಿ ರಸ್ತೆ ಸುಧಾರಣೆ ಕಾಮಗಾರಿಯಾಗಿದ್ದು, ಸದರಿ ರಸ್ತೆಯ ಪಂಚನಾಮೆ ಕ್ರಮವನ್ನು ನಾನು ಪಂಚರ ಸಮಕ್ಷಮ

ಮಧ್ಯಾಹ್ನ 3-45 ರಿಂದ 4-45 ರ ವರೆಗೆ ಮಾಡಿರುತ್ತೇನೆ. ನಂತರ ದೇವಜಿ ನಾಯಕ ತಾಂಡಾಕ್ಕೆ ಭೇಟಿ ನೀಡಿ ಅಲ್ಲಿ ಬಾವಿಗೆ ಅಡ್ಡಗೋಡೆ ನಿರ್ಮಿಸಿದ ಬಗ್ಗೆ ಕಾಮಗಾರಿಯಾಗಿದ್ದು, ಸದರಿ ಕಾಮಗಾರಿಯು 4 ಫೀಟ್ ಎತ್ತರದ ಗೋಡೆಯನ್ನು ನಿರ್ಮಿಸಿದ್ದು, ಸದರಿ ಕಾಮಗಾರಿಯ ಬಗ್ಗೆ ಪಂಚನಾಮೆ ಕ್ರಮವನ್ನು ನಾನು ಚಾಸಾ-2 ಮತ್ತು 3 ರವರ ಸಮಕ್ಷಮ 5-15 ರಿಂದ 6-15ರ ವರೆಗೆ ಜರುಗಿಸಿರುತ್ತೇನೆ.

ನಾನು ಈ ಮೇಲಿನ ಕಾಮಗಾರಿಗಳನ್ನು ಪರಿಶೀಲಿಸಿ, ಪಂಚರ ಸಮಕ್ಷಮ ಪಂಚನಾಮೆ ಕ್ರಮವನ್ನು ಚಾಸಾ-1 ರವರು ತೋರಿಸಿದಂತೆ ಜರುಗಿಸಿರುತ್ತೇನೆ. ನಾನು ಪಂಚನಾಮೆ ಕ್ರಮ ಜರುಗಿಸುವಾಗ ಛಾಯಾಚಿತ್ರಗಳನ್ನು ತೆಗೆಯಿಸಿರುತ್ತೇನೆ.

ದಿನಾಂಕ: 01-06-2007ರಂದು ಚಾಸಾ-7 ರಿಂದ ಚಾಸಾ-15ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ: 12-08-2007ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಜಿಲ್ಲಾ ಪಂಚಾಯತ ಇವರಿಗೆ ದಾಖಲಾತಿಗಳನ್ನು ನೀಡುವಂತೆ ಕೇಳಿಕೊಂಡಿರುತ್ತೇನೆ.

ದಿನಾಂಕ: 06-09-2007ರಂದು ಸದರಿಯವರು ತಮ್ಮ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲವೆಂದು ನನಗೆ ಪ್ರತ್ಯುತ್ತರವನ್ನು ನೀಡಿರುತ್ತಾರೆ. ಸದರಿ ಪ್ರಕರಣದ ತನಿಖೆಯನ್ನು ನಾನು ಪೂರ್ಣಗೊಳಸಿ, ಸದರಿ ಪ್ರಕರಣದಲ್ಲಿ ದಾಖಲಾತಿಗಳ ಕೊರತೆ ಇರುವುದರಿಂದ ದಿನಾಂಕ: 04-03-2008ರಂದು ಮಾನ್ಯ ಡಿ.ವೈ.ಎಸ್.ಪಿ. ಶಹಾಬಾದ ಇವರ ಅನುಮತಿಯನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಬಿ-ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಶಾನೆ ಪಿ-2ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-2(ಎ) ಎಂದು, ನಿಶಾನೆ ಪಿ-3 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-3(ಬಿ) ಎಂದು, ನಿಶಾನೆ ಪಿ-4 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-4(ಬಿ) ಎಂದು, ನಿಶಾನೆ ಪಿ-5ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-5(ಬಿ) ಎಂದು, ನಿಶಾನೆ ಪಿ-6 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-6(ಬಿ) ಎಂದು, ನಿಶಾನೆ ಪಿ-7 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-7(ಬಿ) ಎಂದು, ನಿಶಾನೆ ಪಿ-8 ರಿಂದ ನಿಶಾನೆ ಪಿ-11ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಶಾನೆ ಪಿ-8(ಎ) ರಿಂದ ಪಿ-11(ಎ) ಎಂದು, ಚಾಸಾ-5ರವರ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ

ಪಿ-17ಎಂದು, ಸಹಿಯನ್ನು ನಿಶಾನೆ ಪಿ-17(ಎ) ಎಂದು, ಚಾಸಾ-6ರವರ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-18 ಎಂದು, ಸಹಿಯನ್ನು ನಿಶಾನೆ ಪಿ-18(ಎ) ಎಂದು, ಚಾಸಾ-7ರವರ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-19 ಎಂದು, ಸಹಿಯನ್ನು ನಿಶಾನೆ ಪಿ-19(ಎ) ಎಂದು, ಚಾಸಾ-9ರವರ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-20 ಎಂದು, ಸಹಿಯನ್ನು ನಿಶಾನೆ ಪಿ-20(ಎ) ಎಂದು, ಚಾಸಾ-10ರವರ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-21 ಎಂದು, ಸಹಿಯನ್ನು ನಿಶಾನೆ ಪಿ-21(ಎ) ಎಂದು, ಚಾಸಾ-11ರವರ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-22 ಎಂದು, ಸಹಿಯನ್ನು ನಿಶಾನೆ ಪಿ-22(ಎ) ಎಂದು, ಚಾಸಾ-15ರವರ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-23 ಎಂದು, ಸಹಿಯನ್ನು ನಿಶಾನೆ ಪಿ-23(ಎ) ಎಂದು, ಸಾಕ್ಷಿಯು ದಿನಾಂಕ: 06-09-2007ರ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-24 ಎಂದು, ಸಹಿಯನ್ನು ನಿಶಾನೆ ಪಿ-24(ಎ) ಎಂದು, ಸಾಕ್ಷಿಯು ದಿನಾಂಕ: 17-07-2006ರ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-25 ಎಂದು, ಸಹಿಯನ್ನು ನಿಶಾನೆ ಪಿ-25(ಎ) ಎಂದು, ದಿನಾಂಕ: 19-07-2006ರ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-26 ಎಂದು, ಸಹಿಯನ್ನು ಪಿ-26(ಎ) ಎಂದು, ದಿನಾಂಕ: 12-10-2006ರ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-27 ಎಂದು, ಸಹಿಯನ್ನು ನಿಶಾನೆ ಪಿ-27(ಎ) ಎಂದು, ದಿನಾಂಕ: 22-09-2006ರ ಪತ್ರದಲ್ಲಿರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದು, ಅದನ್ನು ಪಿ-28 ಎಂದು, ಸಹಿಯನ್ನು ಪಿ-28(ಎ), ದಿನಾಂಕ: 25-09-2006ರ ಒಂದು ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-29 ಎಂದು, ಸಹಿಯನ್ನು ನಿಶಾನೆ ಪಿ-29(ಎ) ಎಂದು, ದಿನಾಂಕ: 07-02-2007ರ ಒಂದು ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-30 ಎಂದು ಸಹಿಯನ್ನು ಪಿ-30(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಬಿ.ಎ. ವಕೀಲರಿಂದ :**

ಚಾಸಾ-1 ರವರು ತಾವೇ ಸ್ವತ: ಪೊಲೀಸ ಠಾಣೆಗೆ ಬಂದಿದ್ದರು. ಸದರಿಯವರು ತಾವು ಬರುವಾಗ ತಮ್ಮ ಜೊತೆಗೆ 14 ಕಾಮಗಾರಿಗಳ ದಾಖಲಾತಿಗಳನ್ನು ತೆಗೆದುಕೊಂಡು ಬಂದಿದ್ದರು. ನಾನು ಸಮುದಾಯ ಭವನಕ್ಕೆ ಭೇಟಿ ನೀಡಿದಾಗ ಅದರ ಆಕ್ಷನ್ ಪ್ಲ್ಯಾ ನ್ ನನ್ನ ಬಳಿ ಇರಲಿಲ್ಲ ಮತ್ತು ಚಾಸಾ-1ರವರು ಸದರಿ ಆಕ್ಷನ ಪ್ಲ್ಯಾ ನ್ ನ್ನು ನನ್ನ ಮುಂದೆ ಹಾಜರುಪಡಿಸಿರುವುದಿಲ್ಲ. ಚಾಸಾ-2 ಮತ್ತು 3 ರವರನ್ನು ನಾನೇ ಪಂಚರನ್ನಾ ಗಿ

ಕರೆಯಿಸಿದ್ದೇನು. ನಾನು ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಕಾಮಗಾರಿ ಹಾಗೂ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ, ಚಾಸಾ-1ರವರು ನನಗೆ ಯಾವುದೇ ಕಾಮಗಾರಿಯನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಯಾವುದೇ ಅಪೂರ್ಣ ಕಾಮಗಾರಿಗಳ ಪಂಚನಾಮೆ ಕ್ರಮವನ್ನು ಚಾಸಾ-2 ಮತ್ತು 3ರವರ ಸಮಕ್ಷಮ ಜರುಗಿಸಿರುವುದಿಲ್ಲ. ನಾನು ಚಾಸಾ-4 ರಿಂದ ಚಾಸಾ-6 ರವರ ಹೇಳಿಕೆಗಳನ್ನಾಗಲೀ ಮತ್ತು ಚಾಸಾ-7 ರವರಿಂದ ಚಾಸಾ-15ರವರ ಹೇಳಿಕೆಗಳನ್ನಾಗಲೀ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ಸತ್ಯಾಂಶ ಕಂಡು ಬರದೇ ಇದ್ದ ಕಾರಣ, ಬಿ-ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಕೆಲವು ದಾಖಲಾತಿಗಳು ಅಲಭ್ಯವಿದ್ದುದ್ದರಿಂದ ನಾನು ಬಿ-ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು, ಚಿತ್ತಾಪೂರ.